ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಆರ್.ಐ.ಡಿ.ಎಫ್-2 ಇಲ್ಲಿ ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೃಷ್ಣ ನದಿಯ ಮೇಲೆ ಬ್ರಿಡ್ಜನ್ನು ಕಟ್ಟಿ ಮುಗಿಸಿದ್ದಾರೆ. ಅದೇ ಆರ್.ಐ.ಡಿ.ಎಫ್.-2, ರಲ್ಲಿ ದೂದ್‌ಗಂಗಾ ನದಿಯ ಬ್ರಿಡ್ಜ್‌ನ ಕಾಮಗಾರಿ ಅರ್ಧಕ್ಕೆ ನಿಂತಿದೆ. ಆ ಬ್ರಿಡ್ಜ್‌ನ ಕಾಮಗಾರಿಯನ್ನು ಯಾವಾಗ ಮುಗಿಸುತ್ತೀರಿ? ಮಾನ್ಯ ಸಚಿವರು ಬೆಳಗಾಂಗೆ ಬಂದಿದ್ದಾಗ ಸಂಬಂಧಪಟ್ಟ ಗುತ್ತಿಗೆದಾರರನ್ನು ನಮ್ಮ ಸಮಕ್ಷಮ ಕರೆದು ದೂದ್‌ಗಂಗಾ ಬ್ರಿಡ್ಜ್‌ನ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿಕೊಡಬೇಕೆಂದು ಹೇಳಿದ್ದರು. ಆದರೆ ಇದುವರೆಗೆ ಆ ಕೆಲಸ ಪ್ರಾರಂಭವಾಗಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹಲವಾರು ವರ್ಷಗಳಿಂದ ಕೃಷ್ಣ ನದಿಯ ಮೇಲೆ ಇರುವ ಬ್ರಿಡ್ಜ್‌ನ ಕೆಲಸವನ್ನು ಪೂರ್ತಿ ಮಾಡಿಕೊಟ್ಟಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಒಂದು ಕೋಟಿ 26 ಲಕ್ಷ ರೂಪಾಯಿಗಳ ವೆಚ್ಚದ ಆರ್.ಐ.ಡಿ.ಎಫ್-(2)ರ ಕಾಮಗಾರಿಯನ್ನು ಬೇಗನೆ ಪೂರ್ತಿ ಮಾಡಿಸಿಕೊಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಧರ್ಮಸಿಂಗ್ : ನಬಾರ್ಡ್‌ನವರು ಆರ್.ಐ.ಡಿ.ಎಫ್-(2)ರ ಕಾಮಗಾರಿಗಳನ್ನು ಮಾಡಲು ಈಗಾಗಲೆ ಆದೇಶವನ್ನು ಕೊಟ್ಟಿದ್ದಾರೆ. ಆದಷ್ಟು ಬೇಗ ಕೆಲಸವನ್ನು ಮಾಡಿಸಿ ಕೊಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು 30ನೇ ಪಟ್ಟಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 30ನೇ ಪಟ್ಟಿಯಲ್ಲಿರುವ 110 ಪ್ರಶ್ನೆಗಳ ಪೈಕಿ 66 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಬೆಂಗಳೂರು-ಮೈಸೂರು ಮಧ್ಯೆ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕೆ ಭೂಸ್ವಾಧೀನ

3083 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು-ಮೈಸೂರು ಮಧ್ಯೆ ಎಕ್ಸ್-ಪ್ರೆಸ್ ಹೈವೇ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

2) ಹಾಗಿದ್ದಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆ ಯಾವುದು?

3) ಈ ಯೋಜನೆಯ ಅಂದಾಜು ವೆಚ್ಚದ ಮೊತ್ತ ಎಷ್ಟು?

4) ಎಷ್ಟು ವಿಸ್ತೀರ್ಣದ ಭೂಮಿಯನ್ನು ಈ ಯೋಜನೆಗೆ ವಶಪಡಿಸಿಕೊಳ್ಳಲಾಗಿದೆ?

5) ಆ ಪೈಕಿ ಸರ್ಕಾರದ ಭೂಮಿ ಎಷ್ಟು?

6) ಭೂಮಾಲೀಕರಿಗೆ ನೀಡುವ ಭೂ ಪರಿಹಾರದ ಮೊತ್ತ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

1) ಹೌದು.

2) ಮೆ; ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (ನೈಸಿಲ್

3) ಸುಮಾರು ರೂ. 2,000 ಕೋಟಿಗಳು

4) 20.193 ಎಕರೆಗಳನ್ನು ವಶಪಡಿಸಿಕೊಳ್ಳುವ ಉದ್ದೇಶ ಹೊಂದಿದೆ.

5) 5,688 ಎಕರೆಗಳು

6) ಸಂಬಂಧಿಸಿದ ಜಿಲ್ಲಾಧಿಕಾರಿಗಳು ಇದಕ್ಕಾಗಿ ರಚಿಸಿರುವ ಪರಿಹಾರ ಸಮಿತಿಗಳಲ್ಲಿ ಪರಿಹಾರದ ಮೊತ್ತವನ್ನು ನಿರ್ಧರಿಸುವರು.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಜಮಾ ಆಗುವ ಶುಗರ್ ಕೇನ್ ಸೆಸ್‌ಫಂಡ್ ಬಗ್ಗೆ

3084 - ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು?

ಆ) ಈ ಸಕ್ಕರೆ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯವೆಷ್ಟು?

ಇ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಈವರೆಗೆ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು?

ಈ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಿಂದ ಶುಗರ್‌ಕೇನ್ ಸೆಸ್‌ಫಂಡ್ ರೂಪದಲ್ಲಿ ಸರ್ಕಾರಕ್ಕೆ ವಾರ್ಷಿಕವಾಗಿ ಎಷ್ಟು ಹಣ ಜಮಾ ಆಗಿರುತ್ತದೆ?

ಉ) ಶುಗರ್‌ಕೇನ್ ಸೆಸ್‌ಫಂಡನ್ನು ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತಿದೆ?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 35 ಸಕ್ಕರೆ ಕಾರ್ಖಾನೆಗಳು ಇರುತ್ತವೆ.

ಆ) 35 ಸಕ್ಕರೆ ಕಾರ್ಖಾನೆಗಳಿಂದ ದಿನವಹಿ 66500 ಮೆ.ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದೆ.

ಇ) 180 ದಿನಗಳ ಒಂದು ಹಂಗಾಮಿನಲ್ಲಿ ಈ ಕಾರ್ಖಾನೆಗಳು 140 ಲಕ್ಷ ಟನ್ ಕಬ್ಬು ನುರಿಸಿರುತ್ತವೆ. ಇದರಿಂದ ಸುಮಾರು 13.5 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದೆ.